# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147

## ದಿನಾಂಕ: 07-11-2020 ರಂದು ನವೆಂಬರ್-2020 ಮಾಹೆಯ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ: 07.11.2020 ರಂದು ಬೆಳಗ್ಗೆ 9.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಸಂಪತ್
2. ಶ್ರೀಮತಿ ವಿ. ಹೇಮಾವತಿ
3. ಶ್ರೀ ಎಂ. ಗೋಪಾಲ್
4. ಶ್ರೀ ಜಿ.ಡಿ. ನಾಗರಾಜು
5. ಶ್ರೀ ಪೊರಾಪಾಂಡಿಯನ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ವೆಂಕಟೇಶ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-147, ಆಡುಗೋಡಿ
3. ಶ್ರೀ ಶಾಹಿದ್ ಹೈದರ್, ಹಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ಸಂತೋಷ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, SWM
5. ಶ್ರೀ ದುರ್ಗ ಪ್ರಸಾದ, ಕಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್-147
6. ಶ್ರೀ ಮಾರುತಿ, ಮಾರ್ಷಲ್
7. ಶ್ರೀ ವಿಜಯ್‌ಕುಮಾರ್, ತೆರಿಗೆ ವಸೂಲಿಗಾರರು, ಕಂದಾಯ ಇಲಾಖೆ
8. ಶ್ರೀ ರುದ್ರೇಶ್ ಹೆಚ್.ಕೆ., ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
9. ಶ್ರೀ ಅಣ್ಣಪ್ಪ, ಸೂಪರ್‌ವೈಸರ್, ಎಸ್.ಡಬ್ಲ್ಯೂ.ಎಂ
10. ಶ್ರೀ ಗಂಗಾದ್ರಿ, ಸೂಪರ್‌ವೈಸರ್, ಎಸ್.ಡಬ್ಲ್ಯೂ.ಎಂ
11. ಶ್ರೀ ನಾಗಣ್ಣ .ಡಿ. ಎ.ಎಸ್.ಐ, ಆಡುಗೋಡಿ ಸಂಚಾರ ಪೋಲಿಸ್ ಠಾಣೆ
12. ಶ್ರೀ ಬೀರಪ್ಪ ನಾಗರಲ್, ಪೋಲಿಸ್, ಆಡುಗೋಡಿ ಪೋಲಿಸ್ ಠಾಣೆ
13. ಶ್ರೀ ಎ. ಪರಮೇಶ್, ಪೋಲಿಸ್, ಆಡುಗೋಡಿ ಪೋಲಿಸ್ ಠಾಣೆ
14. ಶ್ರೀ ನಾಗೇಶ ಸಿ.ಕೆ.
15. ಶ್ರೀಮತಿ ಮಂಗಳ ಎಂ.ಎಂ,
16. ಶ್ರೀಮತಿ ಶೃತಿ .ಆರ್

* * * * *

ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ಸಂತೋಷ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, SWM ರವರು ಮಾತನಾಡಿ: ಪಾಸ್‌ಪೋರ್ಟ್ ಆಫೀಸ್ ಹತ್ತಿರ (ಡೆಕತ್ಲೈನ್ ಸ್ಟೋರ್ ಹತ್ತಿರ) ಪ್ರೈವೇಟ್ ಏಜೆನ್ಸಿ ರವರು ಕಾಂಪ್ಯಾಕ್ಟರ್ ತಂದು ರಸ್ತೆಯಲ್ಲಿ ನಿಲ್ಲಿಸಿ, ಲೋಡಿಂಗ್ ಮತ್ತು ಕಸ ವಿಲೇವಾರಿ ಮಾಡುತ್ತಿದ್ದು, ಇದರಿಂದಾಗಿ ಟ್ರಾಫಿಕ್ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಆದುದರಿಂದ ಇದರ ಬಗ್ಗೆ ಕ್ರಮಕೈಗೊಳ್ಳುವಂತೆ ತಿಳಿಸಿದರು.



Scanned by CamScanner

ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ, ಈ ಸಮಸ್ಯೆ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಂಚಾರ ಪೋಲಿಸ್ ಅಧಿಕಾರಿಗಳಿಗೆ ಸೂಚಿಸಿದರು.

8ನೇ ಬ್ಲಾಕ್ ಕೋರಮಂಗಲದಲ್ಲಿ ಬ್ಲಾಕ್‌ಸ್ಪಾಟ್‌ಗಳು ಜಾಸ್ತಿಯಾಗುತ್ತಿದೆ. ಆದ್ದರಿಂದ ಬ್ಲಾಕ್‌ಸ್ಪಾಟ್‌ಗಳನ್ನು ಬೇಗ ತೆಗೆಯಲು ಕೇಳಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಪ್ರತಿದಿನ ನಿರ್ಮಾಣವಾಗಿರುವ ಬ್ಲಾಕ್‌ಸ್ಪಾಟ್ ಗುರುತಿಸಿ, ಅವುಗಳನ್ನು ತೆರವುಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಬ್ಲಾಕ್‌ಸ್ಪಾಟ್ ನಿರ್ಮಾಣವನ್ನು ತಡೆಯಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಂತೆ ಘನತ್ಯಾಜ್ಯ ವಿಭಾಗದ ಅಧಿಕಾರಿಗಳಿಗೆ ತಿಳಿಸಿದರು.

ಅರಣ್ಯ ಇಲಾಖೆ (ಬಿ.ಬಿ.ಎಂ.ಪಿ) ರವರು ಒಣಗಿರುವ ಮರದ ರಂಬೆ ಕೊಂಬೆಗಳನ್ನು ಸರಿಯಾಗಿ ತೆಗೆಯುತ್ತಿಲ್ಲ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಅರಣ್ಯ ಇಲಾಖೆ (ಬಿ.ಬಿ.ಎಂ.ಪಿ) ರವರಿಗೆ ಪತ್ರ ಬರೆದು ಕ್ರಮ ತೆಗೆದುಕೊಳ್ಳಲು ಸೂಚಿಸುವಂತೆ ತಿಳಿಸಿದರು.

ಶ್ರೀ ಗೋಪಾಲ್ ರವರು ಮಾತನಾಡಿ, ಆಂಜನೇಯ ದೇವಸ್ಥಾನದ ಹತ್ತಿರ ನೀರು ನಿಂತುಕೊಳ್ಳುತ್ತಿದ್ದು, ಇದನ್ನು ಸರಿಪಡಿಸುವಂತೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ನೀರು ನಿಂತುಕೊಳ್ಳದಂತೆ ಕ್ರಮವಹಿಸಿ ಸರಿಪಡಿಸಲು ತಿಳಿಸಿದರು.

ಶ್ರೀ ಗೋಪಾಲ್ ರವರು ಮಾತನಾಡಿ, ಬೂಸ್ಟರ್ ಪಂಪ್ ಅಳವಡಿಕೆ ಕಾರ್ಯ ಬೇಗ ಮುಗಿಸಲು ತಿಳಿಸಿರು.

ಶ್ರೀ ಬಿ.ಡಿ.ಎ. ನಾಗರಾಜು ರವರು ಮಾತನಾಡಿ ಚಾಮುಂಡೇಶ್ವರಿ ಉದ್ಯಾನವನದಲ್ಲಿ ಅಳವಡಿಸಿರುವ Fencing ತುಂಬಾ ಹಾಳಾಗಿದ್ದು, ಹೊಸ Fencing ಹಾಕುವಂತೆ ತಿಳಿಸಿದರು.

ಪೌರ ಕಾರ್ಮಿಕರು ಬಯೋಮೆಟ್ರಿಕ್ ಹಾಕಲು ತುಂಬಾ ದೂರ ಬರಬೇಕು. ಆದ್ದರಿಂದ ಬಯೋಮೆಟ್ರಿಕ್ ಪಾಯಿಂಟ್ ಅನ್ನು ಬದಲಾವಣೆ ಮಾಡಬೇಕೆಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಬದಲಾವಣೆ ಮಾಡಲು ತಿಳಿಸಿದರು. ಇದಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ. ರವರು ಬದಲಾವಣೆ ಮಾಡುವುದಾಗಿ ತಿಳಿಸಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಹಾಳಾಗಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಬಗ್ಗೆ ತಿಳಿಸಿದರು. ಅದಕ್ಕೆ ನೋಡಲ್ ಅಧಿಕಾರಿಯವರು ಮಾತನಾಡಿ, ಬೆಸ್ಕಾಂ ಇಂಜಿನಿಯರ್ ಹಾಗೂ ವಾರ್ಡ್ ಇಂಜಿನಿಯರ್ ರವರು ಜಂಟಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಪೌರಕಾರ್ಮಿಕರುಗಳು ಮುಖ್ಯರಸ್ತೆ ಗುಡಿಸಿ, ಚಿಕ್ಕ ರಸ್ತೆಗಳನ್ನು ಗುಡಿಸುತ್ತಿಲ್ಲದಿರುವ ಬಗ್ಗೆ ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಯವರು ಮಾತನಾಡಿ, ಪ್ರತಿ ರಸ್ತೆ ಗುಡಿಸಿ, ಅಲ್ಲಿಯ 3-4 ಮನೆಯ ನಿವಾಸಿಗಳ ಸಹಿ ತೆಗೆದುಕೊಂಡು ದೃಢೀಕರಿಸುವಂತೆ ಸೂಚಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ನೋಡಾಲ್ ಅಧಿಕಾರಿಯವರಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Venkatesh

(ಶ್ರೀ ವೆಂಕಟೇಶ)
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು,
ವಾರ್ಡ್-147 ಆಡುಗೋಡಿ ವಿಭಾಗ



Scanned by CamScanner




Scanned by CamScanner



Scanned by CamScanner



Scanned by CamScanner